

ಪಯಣದ ನಿತ್ರಾಣ
ಕೇವಲ ನನ್ನ ಕನಸುಗಳು ಮಾತ್ರ
ಈ ಒಣಭೂಮಿಯಲ್ಲಿ ಅಲೆದಾಡುವವು

---

ಚಳಿಗಾಲದ ಆಗಸ
ಹಕ್ಕಿ ಮತ್ತು ಚಿಟ್ಟೆಗಳಿಗೆ
ಒಂದು ವಿಚಿತ್ರ ಹೂವು

---



ಹತ್ತಿಯ ಗದ್ದೆ–
ಚಂದಿರನೇ
ಹೂ ಬಿಟ್ಟಂತೆ!

ಮೊದಲ ಹಿಮ
ಅರ್ಧ ಮುಗಿದ ಸೇತುವೆ
ಮೇಲೆ ಬೀಳುತಿದೆ

---

ಈ ಜಗದ ದೂಳನ್ನ
ಮಂಜಿನ ಹನಿಗಳಲ್ಲಿ
ತೊಳೆಯ ಬಯಸುವೆ

---

ಯಾರೂ ಸಂಚರಿಸದ
ಈ ಹಾದಿಯಲಿ
ಶರತ್ಕಾಲದ ಸಂಜೆಯ ಮಬ್ಬು

● **ಕನ್ನಡಕ್ಕೆ: ಡಾವೆಂಕಿ**
ಕಲೆ: ವೆಂಕಟ್ರಮಣ ಭಟ್

